ಕರ್ನಾಟಕಸರ್ಕಾರ
GOVERNMENT OF KARNATAKA

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಬಳ್ಳಾರಿ ವಿಭಾಗ, ಬಳ್ಳಾರಿ ರವರ ಕಛೇರಿ
Office of the
Deputy Conservator of Forests
Ballari Division, Ballari

ರೇಡಿಯೋ ಪಾರ್ಕ್, ಐಟಿಐಕಾಲೇಜ್ಎದುರುಗಡೆ, ಕಿರು ಮೃಗಾಲಯಆವರಣ, ಬಳ್ಳಾರಿ–583102
Radio Park, Opp. ITI College,
Mini Zoo Compound, Ballari
Telephone: 08392-240797
Email: dcfbellaryt@gmail.com


ಸಂಖ್ಯೆ:ಎಂ1/ಎಂಎನ್‌ಜಿ/ಕೆಎಸ್‌ಎಂಸಿಎಲ್(ಎಂಎಂಎಲ್)/ಗಗು.2605/2020–21 ದಿನಾಂಕ:22.11.2024

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಮೆ||. ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ,
ಗಣಿಗುತ್ತಿಗೆ ಸಂಖ್ಯೆ: 2605, ತಿಮ್ಮಪ್ಪನಗುಡಿ ಐರನ್ ಓರ್ ಮೈನ್ಸ್
ಟಿಟಿಎಂಸಿ, ಎ–ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿ ನಗರ, ಬೆಂಗಳೂರು–560027.

ಮಾನ್ಯರೆ,

ವಿಷಯ: Diversion of 19.3044 hectares (Revised from 19.652 hectares) of forest land in North Eastern(NE) Block, Sandur North Range, Sandur taluk, Ballari District for pipeline Conveyor belt at Thimmappanagudi Iron Ore Mine ML No.2605 in favour of M/s. Karnataka State Mineral Corporation Limited (Erstwhile Mysore Minerals Ltd) (Proposal No. FP/KA/MIN/47146/2020 [FORM-A]) – Reg.

ಉಲ್ಲೇಖ:1) ಸರ್ಕಾರದ ಪತ್ರ ಸಂಖ್ಯೆ : ಅಪಜೀ 48 ಎಫ್‌ಎಫ್‌ಎಂ 2022(ಇ) ದಿನಾಂಕ: 25.10.2024.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಪತ್ರ ಸಂಖ್ಯೆ : ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ5–1(ಎಂಎನ್‌ಜಿ)/12/2018–ಎಫ್‌ಸಿ ದಿನಾಂಕ: 06.11.2024.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಕನ್ವೆಯರ್ ಬೆಲ್ಟ್ ಪ್ರಸ್ತಾವನೆ ಕುರಿತು ಉಲ್ಲೇಖ(1) ರ ಪತ್ರದ ಸರ್ಕಾರದ ಪತ್ರದ ಮೂಲಕ ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸಲು ನಿರ್ದೇಶನ ನೀಡಿರುತ್ತಾರೆ.

*"ಅರಣ್ಯ ಅಭಿವೃದ್ಧಿ ತೆರಿಗೆ, ಅದಿರನ್ನು ಹೊರದೇಶಗಳಿಗೆ / ರಾಜ್ಯಗಳಿಗೆ ಮಾರಾಟ ಮಾಡಿರುವ ಎಲ್ಲಾ ವಿವರಗಳನ್ನು ಸಮಗ್ರವಾಗಿ ಕ್ರೋಢೀಕರಿಸಿ ವಾಸ್ತವಾಗಿ M/s. Karnataka State Mineral Corporation Limited ಸಂಸ್ಥೆಯೂ ಅರಣ್ಯ ಇಲಾಖೆಗೆ ಪಾವತಿಸಬೇಕಾಗಿರುವ ಮೊತ್ತವನ್ನು, ಈ ಬಾಕಿ ಉಳಿದಿರುವ ಬಗ್ಗೆ ಕಾರಣ ಮತ್ತು ಸದರಿ ಬಾಕಿಯನ್ನು ಮರುಪಾವತಿಗೆ ಕೈಗೊಂಡ ಕ್ರಮ ಹಾಗೂ ಕೈಗೊಳ್ಳಬೇಕಾದ ಕ್ರಮದ ಕುರಿತು ಸ್ಪಷ್ಟ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಸೂಕ್ತ ವರದಿಯನ್ನು ಸಲ್ಲಿಸುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ."*

ಮುಂದುವರೆದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರು ಉಲ್ಲೇಖ(2) ರ ಪತ್ರದನ್ವಯ ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಿ ವಿವರವಾದ ವರದಿಯನ್ನು ಸಲ್ಲಿಸಲು ನಿರ್ದೇಶನ ನೀಡಿರುತ್ತಾರೆ.

ಈ ಕುರಿತು ನಿಮಗೆ ಅನೇಕ ಬಾರಿ ನಡೆದ ಸಭೆಯಲ್ಲಿ ತಿಳಿಸಿದ್ದರೂ ಸಹ ನೀವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಲಿಖಿತವಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ ನೀವು ಕೂಡಲೇ ಈ ಪತ್ರ ತಲುಪಿದ 7 ದಿನಗಳಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಗೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದೆ.

1) ಅದಿರನ್ನು ಹೊರದೇಶಗಳಿಗೆ / ರಾಜ್ಯಗಳಿಗೆ ಮಾರಾಟ ಮಾಡಿರುವ ಎಲ್ಲಾ ವಿವರಗಳನ್ನು ಅಂದರೆ ಇನ್‌ವಾಯ್ಸ್ ಪ್ರತಿಗಳನ್ನು ಸಲ್ಲಿಸುವುದು. [ಈ ವಿಷಯವು ಗೌರವಾನ್ವಿತ ಉಚ್ಚ ನ್ಯಾಯಲಯದ ಆದೇಶದಂತೆ ಪರಿಶೀಲಿಸಲಾಗುವುದು].
2) ಕಬ್ಬಿಣದ ಅದಿರನ್ನು ಸಾಗಾಣಿಕೆ ಮಾಡದೇ ಅರ್ಧ್ಯಪಿಸಿದ ವಿವರಗಳು.
3) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ನೀಡಿದ ಆಡಿಟ್ ವರದಿಗಳು

ಮೇಲ್ಕಂಡ ಅಂಶಗಳಿಗೆ ಕೂಡಲೇ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ. **ತಪ್ಪಿದ್ದಲ್ಲಿ ಈ ಕುರಿತು ನಿಮ್ಮ ಉತ್ತರ ಏನಿಲ್ಲವೆಂದು ತೀರ್ಮಾನಿಸಿ ಮೇಲಾಧಿಕಾರಿಗಳಿಗೆ ಈ ಹಿಂದೆ ಮಾಡಿದ ಲೆಕ್ಕಾಚಾರದಂತೆ ವರದಿಯನ್ನು ಮತ್ತೊಮ್ಮೆ ಸಲ್ಲಿಸಲಾಗುವುದು. ಇದು ಅತಿ ಜರೂರೆಂದು ತಿಳಿಯುವುದು.**

ತಮ್ಮ ವಿಶ್ವಾಸಿ

ಸಹಿ/-

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ

1) ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
3) ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂಪನ್ಮೂಲ ನಿರ್ವಹಣೆ), ಬೆಂಗಳೂರು ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
4) ಪ್ರತಿಯನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರಿಗೆ ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.

ರವಾನಿಸಲಾಗಿದೆ.
ದಿನಾಂಕ: 29-11-2024
ಸಹಿ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ

O/C